M – 2017

**Subject Code : 30 (NS)** 0950815

# ACCOUNTANCY

(Kannada and English Versions)

Time : 3 Hours 15 Minutes] [Total No. of questions : 27] [Max. Marks : 100

## (Kannada Version)

### ವಿಭಾಗ–ಎ

**ಯಾವುದಾದರೂ ಏಳು** ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ 2 ಅಂಕಗಳು. **(7 × 2 = 14)**

1) ಮೀಸಲು ಎಂದರೇನು?

2) ಲಾಭ–ನಷ್ಟದ ವಿನಿಯೋಗ ಖಾತೆ ಎಂದರೇನು?

3) ಕೀರ್ತಿ ಮೌಲ್ಯವನ್ನು ಕಂಡುಹಿಡಿಯುವ ಎರಡು ವಿಧಾನಗಳನ್ನು ತಿಳಿಸಿರಿ.

4) ನಿಧನ ಹೊಂದಿದ ಪಾಲುದಾರನ ಬಂಡವಾಳ ಖಾತೆಯನ್ನು ಮುಕ್ತಾಯಗೊಳಿಸುವಾಗ ಬರೆಯುವ ರೋಜು ದಾಖಲೆಯನ್ನು ಬರೆಯಿರಿ.

5) ಪಾಲುಗಾರಿಕೆಯ ವಿಸರ್ಜನೆ ಮತ್ತು ಪಾಲುಗಾರಿಕೆ ಸಂಸ್ಥೆಯ ವಿಸರ್ಜನೆಯ ನಡುವಿನ ಎರಡು ವ್ಯತ್ಯಾಸಗಳನ್ನು ತಿಳಿಸಿರಿ.

6) ಅಧಿಕೃತ ಬಂಡವಾಳ ಎಂದರೇನು?

7) ಲಾಭಾಂಶ ವಿತರಣೆಯ ತೆರಿಗೆ (DDT) ಎಂದರೇನು?

8) ಹಣಕಾಸಿನ ಪಟ್ಟಿಯ ವಿಶ್ಲೇಷಣೆಯ ಎರಡು ತಂತ್ರಗಳನ್ನು ತಿಳಿಸಿರಿ.

9) ಲಾಭರಹಿತ ವ್ಯಾಪಾರಿ ಸಂಸ್ಥೆಗೆ ಎರಡು ಉದಾಹರಣೆಯನ್ನು ತಿಳಿಸಿರಿ.

10) ಡೇಟಾಬೇಸ್ ನಿರ್ವಹಣಾ ಪದ್ಧತಿಯ ಎರಡು ಮಾದರಿಯನ್ನು (Models) ತಿಳಿಸಿರಿ.

## ವಿಭಾಗ–ಬಿ

ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ 5 ಅಂಕಗಳು. (4 × 5 = 20)

11) ರಾಧಾ ಮತ್ತು ರಾಣಿ ಸಂಸ್ಥೆಯ ಪಾಲುದಾರರಾಗಿದ್ದು, 2015–16 ನೇ ವರ್ಷಕ್ಕೆ ರಾಧಾಳು ತನ್ನ ಸ್ವಂತಕ್ಕೆ ಈ ಕೆಳಗಿನ ಹಣವನ್ನು ಬಳಸಿದ್ದಾಳೆ :

ದಿನಾಂಕ 01-04-2015 ರಂದು ₹ 5,000

ದಿನಾಂಕ 30-06-2015 ರಂದು ₹ 8,000

ದಿನಾಂಕ 01-12-2015 ರಂದು ₹ 3,000

ದಿನಾಂಕ 31-03-2016 ರಂದು ₹ 2,000

31-3-2016 ಕ್ಕೆ ಕೊನೆಗೊಳ್ಳುವ ವರ್ಷಕ್ಕೆ 10% ದಂತೆ ರಾಧಾಳ ಸ್ವಂತ ವೆಚ್ಚದ ಮೇಲೆ ಗುಣಲಬ್ಧ ಪದ್ಧತಿಯ ಪ್ರಕಾರ ಬಡ್ಡಿಯನ್ನು ಕಂಡುಹಿಡಿಯಿರಿ.

12) A ಮತ್ತು B ಒಂದು ಸಂಸ್ಥೆಯಲ್ಲಿ 6 : 4 ಪ್ರಮಾಣದಲ್ಲಿ ಲಾಭ ಮತ್ತು ನಷ್ಟವನ್ನು ಹಂಚಿಕೊಳ್ಳುವ ಪಾಲುಗಾರರಾಗಿದ್ದಾರೆ. ಅವರು C ಯನ್ನು ಹೊಸ ಪಾಲುಗಾರನೆಂದು ಸೇರಿಸಿಕೊಂಡು ಅವನಿಗೆ $\frac{6}{20}$ ನೇ ಪಾಲನ್ನು ಕೊಡಲಾಯಿತು. ಈ ಪ್ರಮಾಣವನ್ನು A ಯಿಂದ $\frac{4}{20}$ ಮತ್ತು B ಯಿಂದ $\frac{2}{20}$ ರಷ್ಟು ಪಡೆದಿರುತ್ತಾನೆ.

ಎಲ್ಲಾ ಪಾಲುಗಾರರ ಹೊಸ ಲಾಭದ ಪ್ರಮಾಣವನ್ನು ಕಂಡುಹಿಡಿಯಿರಿ.

13) ಶೀನು, ಶಂಕರ ಮತ್ತು ಶರಣ ಪಾಲುಗಾರರಾಗಿದ್ದು, ಲಾಭ–ನಷ್ಟದ ಪ್ರಮಾಣ 4 : 3 : 3 ರಂತೆ ಇದೆ. ದಿನಾಂಕ 01-04-2016 ರಂದು ಅವರು ಅನುಕ್ರಮವಾಗಿ ₹ 1,00,000; ₹ 80,000 ಮತ್ತು ₹ 50,000 ಬಂಡವಾಳವನ್ನು ಹೊಂದಿರುತ್ತಾರೆ.

ದಿನಾಂಕ 01-10-2016 ರಂದು ಶೀನು ನಿಧನ ಹೊಂದಿದ್ದು, ಪಾಲುಗಾರಿಕೆಯ ಒಪ್ಪಂದದಲ್ಲಿ ಈ ಕೆಳಗಿನ ಅಂಶಗಳಿವೆ :

a) ಬಂಡವಾಳದ ಮೇಲೆ ವಾರ್ಷಿಕ 12% ದಂತೆ ಬಡ್ಡಿ.

b) ಅವನು ನಿಧನ ಹೊಂದಿದ ದಿನಾಂಕದವರೆಗೆ ಸ್ವಂತಕ್ಕೆ ಪಡೆದ ಹಣ ₹ 5,000

c) ಶೀನುವಿನ ಕೀರ್ತಿಮೌಲ್ಯದ ಭಾಗ ₹ 5,000 ಮತ್ತು

d) ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಮರಣ ಹೊಂದಿದ ದಿನಾಂಕದವರೆಗಿನ ಲಾಭದ ಪಾಲನ್ನೂ ಪಡೆಯಬಹುದು. ಹಿಂದಿನ ವರ್ಷದ ಲಾಭ ₹ 20,000.

ಶೀನುವಿನ ವಾರಸುದಾರರ ಖಾತೆಯನ್ನು ತಯಾರಿಸಿರಿ.

14) ಕರ್ನಾಟಕ ಕಂ. ನಿಯಮಿತ ಇವರು ₹ 10 ಮುಖಬೆಲೆಯ 10,000 8% ಸಾಲಪತ್ರಗಳನ್ನು ಬಿಡುಗಡೆ ಮಾಡಿದ್ದಾರೆ. ಸದರಿ ಹಣವನ್ನು ಈ ಕೆಳಕಂಡಂತೆ ಪಾವತಿಸಲು ಸೂಚಿಸಿದೆ.

₹ 2 ಅರ್ಜಿ ಹಣ

₹ 4 ಹಂಚಿಕೆ ಹಣ

₹ 4 ಪ್ರಥಮ ಹಾಗೂ ಅಂತಿಮ ಕರೆ ಹಣ

ಎಲ್ಲಾ ಸಾಲಪತ್ರಗಳು ವಂತಿಕೆಯಾಗಿ ಹಾಗೂ ಹಣ ಅಧಿಕೃತವಾಗಿ ಸ್ವೀಕರಿಸಲಾಗಿದೆ. ಸಾಲಪತ್ರಗಳ ಪ್ರಥಮ ಹಾಗೂ ಅಂತಿಮ ಕರೆಯವರೆಗೆ ರೋಜು ದಾಖಲೆಗಳನ್ನು ಬರೆಯಿರಿ.

15) ಈ ಕೆಳಗಿನ ವಿವರಗಳ ಸಹಾಯದಿಂದ ದಾಸ್ತಾನು ವಹಿವಾಟು ಅನುಪಾತ ಮತ್ತು ಕರಡು ಲಾಭದ ಅನುಪಾತ (Gross Profits Ratio) ವನ್ನು ಕಂಡುಹಿಡಿಯಿರಿ.

| | |
|---|---|
| ನಿವ್ವಳ ಮಾರಾಟಗಳು | ₹ 4,00,000 |
| ಕರಡು ಲಾಭ | ₹ 1,00,000 |
| ಆರಂಭಿಕ ದಾಸ್ತಾನು | ₹ 60,000 |
| ಅಂತಿಮ ದಾಸ್ತಾನು | ₹ 90,000. |

16) ಈ ಕೆಳಗಿನ ಖಾತಾ ಶಿಲ್ಕುಗಳಿಂದ, ಶ್ರೀ ಸ್ಪೋರ್ಟ್ಸ್ ಕ್ಲಬ್‌ನ 31-3-2016 ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಸ್ವೀಕೃತಿ ಮತ್ತು ಪಾವತಿ ಖಾತೆಯನ್ನು ತೆರೆಯಿರಿ..

| | ₹ |
|---|---|
| ಕೈಯಲ್ಲಿರುವ ನಗದು | 10,000 |
| ದಿನಪತ್ರಿಕೆಗಳ ವಂತಿಕೆ | 3,000 |
| ಮೈದಾನದ ನಿರ್ವಹಣಾ ವೆಚ್ಚ | 10,000 |
| ಕಾರ್ಯಕ್ರಮದಿಂದ ಬಂದ ಆದಾಯ | 10,000 |
| ಗಣಕಯಂತ್ರ ಖರೀದಿ | 5,000 |
| ವಂತಿಗೆಗಳು ಪಡೆದದ್ದು | 40,000 |
| ದತ್ತಿ ನಿಧಿ ಪಡೆದದ್ದು | 2,000 |
| ಬಾಡಿಗೆ ಸ್ವೀಕರಿಸಿದ್ದು | 2,000 |
| ಪುಸ್ತಕಗಳ ಖರೀದಿ | 5,000 |

17) ದತ್ತಾಂಶಗಳ ಸಂಸ್ಕರಣದ ಪದ್ಧತಿಗಳ (Data processing system) ಪ್ರಕಾರಗಳನ್ನು ಒಂದೊಂದು ಉದಾಹರಣೆಗಳೊಂದಿಗೆ ವಿವರಿಸಿ.

## ವಿಭಾಗ–ಸಿ

ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ 14 ಅಂಕಗಳು. **(4 × 14 = 56)**

18) ಮೈನಿಂಗ್ ಕಂಪೆನಿಯೊಂದು ₹ 50,000 ಕ್ಕೆ 5 ವರ್ಷದ ಗೇಣಿಯನ್ನು ದಿನಾಂಕ 1-4-2011 ರಂದು ಹಿಡಿದರು. ಅದರ ಮೇಲೆ ವಾರ್ಷಿಕ 5% ದಂತೆ ಬಡ್ಡಿಯನ್ನು ಲೆಕ್ಕಹಾಕಿ, ವರ್ಷಾಶನ ಪದ್ಧತಿಯಿಂದ ಸವಕಳಿ ತೆಗೆಯಲು ನಿರ್ಧರಿಸಿದರು. ವರ್ಷಾಶನ ಕೋಷ್ಟಕದ ಪ್ರಕಾರ 5% ಬಡ್ಡಿಯ ಪ್ರಕಾರ ಐದು ವರ್ಷಗಳ ಅವಧಿಯಲ್ಲಿ 1 ರೂಪಾಯಿಗೆ ಸವಕಳಿಯ ಮೊತ್ತವು ವಾರ್ಷಿಕ ರೂ. 0.230975 ಆಗುತ್ತದೆ.

ದಿನಾಂಕ 31-3-2016 ಕ್ಕೆ ಕೊನೆಗೊಳ್ಳುವಂತೆ ಐದು 5 ವರ್ಷಗಳವರೆಗೆ ಗೇಣಿಯ ಖಾತೆ ಮತ್ತು ಬಡ್ಡಿ ಖಾತೆಯನ್ನು ತೆರೆಯಿರಿ.

19) X, Y ಮತ್ತು Z ಪಾಲುದಾರರು ಲಾಭ–ನಷ್ಟವನ್ನು ಕ್ರಮವಾಗಿ 2 : 2 : 1 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. 31-3-2016 ರಲ್ಲಿ ಅವರ ಅಢಾವೆ ಪತ್ರ ಈ ಕೆಳಗಿನಂತಿದೆ.

ದಿನಾಂಕ 31-3-2016 ರ ಅಢಾವೆ ಪತ್ರ

| ಜವಾಬ್ದಾರಿಗಳು | | ₹ | ಆಸ್ತಿಗಳು | | ₹ |
|---|---|---|---|---|---|
| ಸಾಹುಕಾರರು | | 25,000 | ಬ್ಯಾಂಕ್‌ನಲ್ಲಿ ನಗದು | | 10,000 |
| ಕೊಡತಕ್ಕ ಹುಂಡಿಗಳು | | 10,000 | ಬರತಕ್ಕ ಹುಂಡಿಗಳು | | 10,000 |
| ಮೀಸಲು ನಿಧಿ | | 20,000 | ಸಾಲಗಾರರು | 40,000 | |
| ಲಾಭ–ನಷ್ಟ ಖಾತೆ | | 3,000 | ಕಳೆ (-)PBD | 2,000 | 38,000 |
| ಬಂಡವಾಳ ಖಾತೆಗಳು | | | ದಾಸ್ತಾನು | | 20,000 |
| X | 50,000 | | ಯಂತ್ರಗಳು | | 20,000 |
| Y | 30,000 | | ಪೀಠೋಪಕರಣ | | 10,000 |
| Z | 20,000 | 1,00,000 | ಕಟ್ಟಡಗಳು | | 50,000 |
| | | 1,58,000 | | | 1,58,000 |

Z ರವರು ದಿನಾಂಕ 1-4-2016 ರಂದು ಸಂಸ್ಥೆಯಿಂದ ನಿವೃತ್ತಿ ಹೊಂದಿದರು. ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡಲಾಯಿತು.

a) ದಾಸ್ತಾನಿನ ಬೆಲೆಯನ್ನು 20% ಹೆಚ್ಚಿಸಲಾಗಿದೆ.

b) ಸಾಲಗಾರರ ಮೇಲೆ 10% ಸಂಶಯಾಸ್ಪದ ಸಾಲದ ಮೀಸಲನ್ನು (P.B.D) ತೆಗೆಯಲಾಗಿದೆ.

c) ಯಂತ್ರಗಳು ಮತ್ತು ಪೀಠೋಪಕರಣಗಳ ಮೇಲೆ 10% ವಾರ್ಷಿಕ ಸವಕಳಿಯನ್ನು ತೆಗೆಯಲಾಗಿದೆ.

d) ಕಟ್ಟಡಗಳ ಬೆಲೆಯನ್ನು ₹ 60,000 ಗಳಷ್ಟು ಮರುಮೌಲ್ಯ ಮಾಡಿದೆ.

e) ಸಂಸ್ಥೆಯ ಕೀರ್ತಿಮೌಲ್ಯವನ್ನು ₹ 25,000 ಗಳಷ್ಟು ಸೃಷ್ಟಿಸಿ ತಕ್ಷಣ ರದ್ದು ಪಡಿಸುವುದು (written off)

ತಯಾರಿಸಿರಿ :

i) ಪುನರ್‌ಮೌಲ್ಯ ಖಾತೆ

ii) ಪಾಲುದಾರರ ಬಂಡವಾಳ ಖಾತೆ

iii) 1-4-2016 ರ ಅಢಾವೆ ಪತ್ರ

20) ರಾಜು ಮತ್ತು ರವಿ ಪಾಲುದಾರರು. ಲಾಭ–ನಷ್ಟವನ್ನು 3 : 2 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಇವರ ಅಢಾವೆ ಪತ್ರ 31-3-2016 ರಂದು ಈ ಕೆಳಗಿನಂತಿದೆ :

ದಿನಾಂಕ 31-3-2016 ರ ಅಢಾವೆ ಪತ್ರ

| ಜವಾಬ್ದಾರಿಗಳು | | ₹ | ಆಸ್ತಿಗಳು | ₹ |
|---|---|---|---|---|
| ಸಾಹುಕಾರರು | | 20,000 | ಕೈಯಲ್ಲಿನ ನಗದು | 5,000 |
| ಕೊಡತಕ್ಕ ಹುಂಡಿಗಳು | | 10,000 | ಬರತಕ್ಕ ಹುಂಡಿಗಳು | 15,000 |
| ಬ್ಯಾಂಕ್ ಸಾಲ | | 15,000 | ಸಾಲಗಾರರು | 20,000 |
| ರಾಜುವಿನ ಸಾಲ | | 5,000 | ಮೋಟಾರ್ ಕಾರು | 10,000 |
| ಸಾಮಾನ್ಯ ಮೀಸಲು | | 10,000 | ಯಂತ್ರಗಳು | 30,000 |
| ಬಂಡವಾಳಗಳು | | | ಪೀಠೋಪಕರಣಗಳು | 15,000 |
| ರಾಜು | 50,000 | | ಕಟ್ಟಡಗಳು | 50,000 |
| ರವಿ | 40,000 | 90,000 | ಲಾಭ–ನಷ್ಟ ಖಾತೆ | 5,000 |
| | | 1,50,000 | | 1,50,000 |

ಮೇಲಿನ ದಿನಾಂಕದಂದು ಪಾಲುದಾರಿಕೆ ಸಂಸ್ಥೆಯನ್ನು ವಿಸರ್ಜಿಸಲಾಯಿತು.

ಆಸ್ತಿಗಳನ್ನು ಈ ಕೆಳಕಂಡಂತೆ ವಿಲೇವಾರಿ ಮಾಡಲಾಯಿತು :

a) ಕಟ್ಟಡಗಳು ₹ 60,000, ಯಂತ್ರಗಳು ₹ 28,000, ಬರತಕ್ಕ ಹುಂಡಿಗಳು ₹ 14,000, ಸಾಲಗಾರರು ₹ 19,000 ಮತ್ತು ದಾಖಲಾಗಿರದ ಆಸ್ತಿಗಳ ವಿಲೇವಾರಿಯಿಂದ ₹ 20,000.

b) ರಾಜು ಮೋಟಾರ್ ಕಾರನ್ನು ಪುಸ್ತಕದ ಬೆಲೆಗೆ ತೆಗೆದುಕೊಂಡ.

c) ರವಿ ಪೀಠೋಪಕರಣಗಳನ್ನು ₹ 13,000 ಕ್ಕೆ ತೆಗೆದುಕೊಂಡ.

d) ಸಾಹುಕಾರರು ಮತ್ತು ಕೊಡತಕ್ಕ ಹುಂಡಿಗಳನ್ನು 5% ಸೋಡಿಯಲ್ಲಿ ಪಾವತಿ ಮಾಡಿತು ಹಾಗೂ ಬ್ಯಾಂಕ್ ಸಾಲ ಪೂರ್ಣವಾಗಿ ಪಾವತಿಯಾಯಿತು.

e) ವಿಸರ್ಜನಾ ವೆಚ್ಚ ₹ 2,000.

ತಯಾರಿಸಿರಿ :

i) ವಿಲೇವಾರಿ ಖಾತೆ

ii) ಪಾಲುದಾರರ ಬಂಡವಾಳ ಖಾತೆ

iii) ನಗದು ಖಾತೆ

21) ಸಾಗರ್ ಕಂಪೆನಿ ನಿಯಮಿತ ಇವರು ತಲಾ ₹ 100 ರ ಮುಖಬೆಲೆಯ 20,000 ಶೇರುಗಳನ್ನು ಪ್ರತಿಶೇರಿಗೆ ₹ 10 ರಂತೆ ಸೋಡಿ ದರದಲ್ಲಿ ಬಿಡುಗಡೆ ಮಾಡಿದೆ. ಹಣವನ್ನು ಈ ಕೆಳಗಿನಂತೆ ವಸೂಲಿ ಮಾಡಲಾಗುವುದು.

ಅರ್ಜಿಯೊಂದಿಗೆ ₹ 20

ಹಂಚಿಕೆಯೊಂದಿಗೆ ₹ 20

ಮೊದಲನೇ ಕರೆ ಹಣ ₹ 30

ಅಂತಿಮ ಕರೆ ಹಣ ₹ 20

ಎಲ್ಲಾ ಶೇರುಗಳಿಗೆ ವಂತಿಗೆಯನ್ನು ಪಡೆದುಕೊಳ್ಳಲಾಯಿತು. ಆದರೆ 1000 ಶೇರುಗಳ ಮೇಲಿನ ಅಂತಿಮ ಕರೆಹಣವನ್ನು ಹೊರತುಪಡಿಸಿ ಉಳಿದ ಎಲ್ಲಾ ಮೊತ್ತವನ್ನೂ ಕಂಪೆನಿ ಪಡೆದುಕೊಂಡಿತು. ಕಂಪೆನಿಯ ನಿರ್ದೇಶಕರು ಈ ಶೇರುಗಳನ್ನು ಮುಟ್ಟುಗೋಲು ಹಾಕಿ, ಪ್ರತಿಯೊಂದಕ್ಕೆ ₹ 80 ರಂತೆ ಪೂರ್ಣ ಪಾವತಿಯಾದ ಶೇರುಗಳೆಂದು ಮರುಬಿಡುಗಡೆ ಮಾಡಿದರು. ಶೇರುಗಳ ಬಿಡುಗಡೆ, ಮುಟ್ಟುಗೋಲು ಹಾಗೂ ಮರುಬಿಡುಗಡೆಗೆ ಸಂಬಂಧಿಸಿದಂತೆ ಆವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

22) ದಿನಾಂಕ 31-3-2016 ಕ್ಕೆ ಅಂತ್ಯಗೊಳ್ಳುವಂತೆ TATA ಕಂ. ನಿಯಮಿತ ಇವರ ತಾಳೆಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ. ಹಣಕಾಸಿನ ಪಟ್ಟಿಗಳನ್ನು ಲಂಬಪದ್ಧತಿಯಲ್ಲಿ ತಯಾರಿಸಿರಿ.

ದಿನಾಂಕ 31-3-2016 ರ ತಾಳೆಪಟ್ಟಿ

| ಕ್ರ.ಸಂ. | ಖಾತೆಗಳ ಹೆಸರು | ಖರ್ಚು | ಜಮಾ |
|---|---|---|---|
| | | ₹ | ₹ |
| 1. | ಸಾಮಾನ್ಯ ಶೇರು ಬಂಡವಾಳ (ಪ್ರತಿಶೇರಿಗೆ ₹ 100) | | 8,00,000 |
| 2. | ಖರೀದಿ ಮತ್ತು ಮಾರಾಟ | 4,00,000 | 9,50,000 |
| 3. | ಕೀರ್ತಿಮೌಲ್ಯ | 3,00,000 | – |
| 4. | ವ್ಯಾಪಾರಿ ಬರತಕ್ಕವುಗಳು | 2,50,000 | – |
| 5. | ಆರಂಭಿಕ ದಾಸ್ತಾನು | 60,000 | – |
| 6. | ಪೇಟೆಂಟ್ | 50,000 | – |
| 7. | ಹೆಚ್ಚುವರಿ ಲಾಭ 1-4-2015 | – | 75,000 |
| 8. | ಯಂತ್ರಗಳು | 2,60,000 | – |
| 9. | ಕಟ್ಟಡಗಳು | 2,50,000 | – |
| 10. | 8% ಸಾಲಪತ್ರಗಳು | – | 2,00,000 |
| 11. | ನಗದು ಮತ್ತು ನಗದು ಸಮಾನ | 2,00,000 | |
| 12. | ವ್ಯಾಪಾರಿ ಕೊಡತಕ್ಕವುಗಳು | – | 1,80,000 |
| 13. | ಸಂಬಳ ಮತ್ತು ಕೂಲಿ | 1,75,000 | – |
| 14. | ರೈಲು ಬಾಡಿಗೆ | 50,000 | – |
| 15. | ಬಾಡಿಗೆದರ ಮತ್ತು ತೆರಿಗೆಗಳು | 60,000 | – |
| 16. | ಸಾಲಪತ್ರಗಳ ಮೇಲಿನ ಬಡ್ಡಿ | 16,000 | – |
| 17. | ಇಂಧನ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | 50,000 | – |
| 18. | ಸಾಮಾನ್ಯ ಮೀಸಲು | – | 1,00,000 |
| 19. | ನೌಕರರಿಗೆ ಮುಂಗಡ ಕೊಟ್ಟದ್ದು | 84,000 | – |
| 20. | ಪೀಠೋಪಕರಣಗಳು | 1,00,000 | – |
| | | 23,05,000 | 23,05,000 |

ಹೊಂದಾಣಿಕೆಗಳು :

a) ಅಂತಿಮ ದಾಸ್ತಾನು ₹ 1,45,000

b) ತೆರಿಗೆಗೆ ಕಾಯ್ದಿರಿಸಿದ ಹಣ ₹ 30,000

c) ಮೀಸಲು ನಿಧಿಗೆ ವರ್ಗಾಯಿಸಿದ್ದು ₹ 40,000

d) ನಿರ್ದೇಶಕರು ಘೋಷಿಸಲು ನಿರ್ಧರಿಸಿದ ಲಾಭಾಂಶ ₹ 50,000

e) ಯಂತ್ರಗಳ ಮೇಲೆ ವಾರ್ಷಿಕ 10% ದಂತೆ ಮತ್ತು ಪೀಠೋಪಕರಣಗಳ ಮೇಲೆ 5% ದಂತೆ ಸವಕಳಿಯನ್ನು ತೆಗೆಯಿರಿ.

f) ಲಾಭಾಂಶದ ಮೇಲೆ 16.995% ದಂತೆ D.D.T ಲೆಕ್ಕಹಾಕಿ.

23) ಈ ಕೆಳಗೆ ನೀಡಿದ ABC ಕಂ. ನಿಯಮಿತ ಇವರ 31-3-2015 ಮತ್ತು 31-3-2016 ಕ್ಕೆ ಅಂತ್ಯಗೊಳ್ಳುವ ಅಢಾವೆ ಪತ್ರದಿಂದ ಸಾಮಾನ್ಯ ಗಾತ್ರ ಪಟ್ಟಿ ಅಢಾವೆ ಪತ್ರ ತಯಾರಿಸಿ.

ಅಢಾವೆ ಪತ್ರ 31-3-2015 ಮತ್ತು 2016.

| ಹೊಣೆಗಾರಿಕೆಗಳು | 31-3-15 | 31-3-16 | ಆಸ್ತಿಗಳು | 31-3-15 | 31-3-16 |
|---|---|---|---|---|---|
| | ₹ | ₹ | | ₹ | ₹ |
| ಸಾಮಾನ್ಯ ಶೇರು ಬಂಡವಾಳ | 5,00,000 | 6,00,000 | ಕಟ್ಟಡಗಳು | 3,00,000 | 4,00,000 |
| | | | ಯಂತ್ರಗಳು | 2,50,000 | 3,00,000 |
| ಸಾಮಾನ್ಯ ಮೀಸಲು | 2,00,000 | 3,00,000 | ಕೀರ್ತಿಮೌಲ್ಯ | 2,00,000 | 2,50,000 |
| ಲಾಭ–ನಷ್ಟ ಖಾತೆ | 1,00,000 | 50,000 | ಚಾಲ್ತಿ ಹೂಡಿಕೆ | 2,60,000 | 2,00,000 |
| ಸಾಲಪತ್ರಗಳು | 4,00,000 | 3,00,000 | ದಾಸ್ತಾನು | 40,000 | 75,000 |
| ವ್ಯಾಪಾರಿ ಕೊಡತಕ್ಕವುಗಳು | 2,00,000 | 2,50,000 | ವ್ಯಾಪಾರಿ ಬರತಕ್ಕವುಗಳು | 3,75,000 | 2,90,000 |
| ಅಲ್ಪಾವಧಿ ಮೀಸಲು | 50,000 | 75,000 | ಕೈಯಲ್ಲಿರುವ ನಗದು | 10,000 | 20,000 |
| | | | ಬ್ಯಾಂಕಿನಲ್ಲಿರುವ ನಗದು | 15,000 | 40,000 |
| | 14,50,000 | 15,75,000 | | 14,50,000 | 15,75,000 |

24) ಸನ್ ಕ್ಲಬ್ ಧಾರವಾಡವು ದಿನಾಂಕ 1-4-2015 ರಂದು ಪ್ರಾರಂಭಗೊಂಡಿತು. 31-3-2016 ಕ್ಕೆ ಅಂತ್ಯವಾಗುವ ಸ್ವೀಕೃತಿ ಮತ್ತು ಪಾವತಿ ಖಾತೆಯು ಈ ಕೆಳಗಿನಂತಿದೆ :

ದಿನಾಂಕ 31-3-2016 ಕ್ಕೆ ಸ್ವೀಕೃತಿ ಮತ್ತು ಪಾವತಿ ಖಾತೆ.

| Dr. | | | Cr. |
|---|---|---|---|
| ಸ್ವೀಕೃತಿ | ₹ | ಪಾವತಿ | ₹ |
| ವಂತಿಗೆಗೆ | 70,000 | ಸಂಬಳ ಮೂಲದಿಂದ | 26,500 |
| ಬಡ್ಡಿಗೆ | 11,000 | ಕ್ರೀಡಾಕೂಟ ವೆಚ್ಚದಿಂದ | 20,000 |
| ಕ್ರೀಡಾಕೂಟ ನಿಧಿಗೆ | 30,000 | ದೂರವಾಣಿ ವೆಚ್ಚದಿಂದ | 6,500 |
| ಕ್ರೀಡಾ ಶುಲ್ಕಕ್ಕೆ | 25,000 | ಕ್ರೀಡಾ ವೆಚ್ಚದಿಂದ | 10,000 |
| ಆಜೀವ ಸದಸ್ಯತ್ವಕ್ಕೆ | 40,000 | ಕ್ರೀಡಾ ಸಾಮಗ್ರಿಗಳ ವೆಚ್ಚದಿಂದ | 20,000 |
| ದೇಣಿಗೆಗೆ | 2,00,000 | ಕಟ್ಟಡ ವೆಚ್ಚದಿಂದ | 2,00,000 |
| ಪ್ರವೇಶ ಶುಲ್ಕಕ್ಕೆ | 1,00,000 | ಪೀಠೋಪಕರಣ ವೆಚ್ಚದಿಂದ | 30,000 |
| | | ಕಛೇರಿ ವೆಚ್ಚದಿಂದ | 10,000 |
| | | ಹೂಡಿಕೆಗಳು | 1,00,000 |
| | | ಅಂತಿಮ ಶಿಲ್ಕು | 53,000 |
| | 4,76,000 | | 4,76,000 |

ಹೊಂದಾಣಿಕೆಗಳು :

a) ಕೊಡಬೇಕಾದ ಸಂಬಳ ₹ 2,000.

b) ದೇಣಿಗೆಗಳು ಮತ್ತು ಪ್ರವೇಶಶುಲ್ಕ ಬಂಡವಾಳೀಕರಿಸಿದೆ.

c) ದಿನಾಂಕ 31-3-2016 ರಂದು ಕ್ರೀಡಾ ಸಾಮಗ್ರಿಗಳ ಮೌಲ್ಯವು ₹ 8,500 ಇದೆ.

d) ಕಟ್ಟಡ ಮತ್ತು ಪೀಠೋಪಕರಣಗಳ ಮೇಲೆ 10% ಸವಕಳಿಯನ್ನು ಹಾಕಿದೆ.

e) ಬರಬೇಕಾದ ವಂತಿಗೆ ₹ 5,000 ಮತ್ತು ಮುಂಗಡ ಬಂದ ವಂತಿಗೆ ₹ 3,000.

ತಯಾರಿಸಿರಿ :

i) ಆದಾಯ ಮತ್ತು ವೆಚ್ಚದ ಖಾತೆ

ii) ಅಢಾವೆ ಪತ್ರ

## ವಿಭಾಗ–ಡಿ

### (ಪ್ರಾಯೋಗಿಕ ಪ್ರಶ್ನೆಗಳು)

**ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ 5 ಅಂಕಗಳು.** **(2 × 5 = 10)**

25) ಕಾಲ್ಪನಿಕ ಮೊಬಲಗುಗಳ ಸಹಾಯದಿಂದ ಯಂತ್ರದ ಖಾತೆಯನ್ನು ಸ್ಥಿರ ಸವಕಳಿ ಪದ್ಧತಿಯ ಪ್ರಕಾರ ಎರಡು ವರ್ಷಗಳಿಗೆ ತಯಾರಿಸಿರಿ.

26) ಐದು ಕಾಲ್ಪನಿಕ ಮೊಬಲಗುಗಳನ್ನು ಹೊಂದಿರುವ ಇಬ್ಬರು ಪಾಲುದಾರರ ಚಾಲ್ತಿಖಾತೆಯನ್ನು ಸ್ಥಿರ ಬಂಡವಾಳ ಪದ್ಧತಿಯಲ್ಲಿ ತಯಾರಿಸಿರಿ.

27) ಐದು ಕಾಲ್ಪನಿಕ ಮೊಬಲಗುಗಳ ಸಹಾಯದಿಂದ ತುಲನಾತ್ಮಕ ಲಾಭ–ನಷ್ಟ ಪಟ್ಟಿ (ಆದಾಯ ಪಟ್ಟಿ)ಯನ್ನು ಎರಡು ವರ್ಷಕ್ಕೆ ತಯಾರಿಸಿರಿ.

(English Version)

## SECTION – A

Answer any **seven** questions. Each question carries **2** marks : **(7 × 2 = 14)**

1) What is Reserves?

2) What is Profit and Loss appropriation account?

3) State any two methods of valuing goodwill.

4) Write the journal entry to close the deceased partner capital account.

5) State any two differences between dissolution of partnership and dissolution of partnership firm.

6) What is authorised capital?

7) What is Dividend Distribution Tax?

8) State any two techniques of financial statement analysis.

9) Give any two examples of non-profit organisations.

10) Mention any two models of database management system.

## SECTION – B

Answer **any four** questions. Each question carries **5** marks : **(4 × 5 = 20)**

11) Radha and Rani are partners in a firm. Radha's drawings for the year 2015–16 are given as under :

₹ 5,000 on 01-04-2015

₹ 8,000 on 30-06-2015

₹ 3,000 on 01-12-2015

₹ 2,000 on 31-03-2016

Calculate interest on Radha's drawings at 10% p.a. for the year ending 31-3-2016 under product method.

12) A and B are partners sharing profits and losses in the ratio of 6 : 4. They admit 'C' into the partnership, giving him $\frac{6}{20}$th share, which he acquires in the proportion of $\frac{4}{20}$ and $\frac{2}{20}$ from A and B.

Calculate the new profit sharing ratio of all the partner's.

13) Sheenu, Shankar and Sharan are partners sharing profits and losses in the ratio of 4 : 3 : 3. Their capital balance on 01-04-2016 stood at ₹ 1,00,000; ₹ 80,000 and ₹ 50,000 respectively.

Sheenu died on 01-10-2016. The partnership deed provides the followings :

a) Interest on capital at 12% p.a.

b) He had withdrawn ₹ 5,000 upto date of death.

c) Sheenu's share of goodwill ₹ 5,000

d) His share of profit upto the date of death on the basis of previous year profits. Previous year profits ₹ 20,000

Prepare Sheenu's Executors account.

14) Karnataka Co. Limited issued 10,000 8% debentures of ₹ 10 each. Payable as follows :

₹ 2 on applications

₹ 4 on allotments

₹ 4 on first and final calls

All the debentures were subscribed and the money duly received.

Pass the journal entries upto the stage of first and final calls made.

15) Calculate Inventory Turnover Ratio and Gross Profits Ratio from the following informations.

| | |
|---|---|
| Net sales | ₹ 4,00,000 |
| Gross profits | ₹ 1,00,000 |
| Opening Inventory | ₹ 60,000 |
| Closing Inventory | ₹ 90,000. |

16) From the following ledger balance, prepare Receipts and Payment Account of Shree Sports Club for the year ending 31-3-2016.

| | ₹ |
|---|---|
| Cash balance | 10,000 |
| Subscription to newspapers | 3,000 |
| Upkeep of ground | 10,000 |
| Proceeds from concerts | 10,000 |
| Computers purchased | 5,000 |
| Subscriptions Received | 40,000 |
| Endowment fund | 2,000 |
| Rent received | 2,000 |
| Books purchased | 5,000 |

17) Explain the types of data processing system with one example each.

## SECTION – C

Answer **any four** questions. Each question carries **14** marks : **(4 × 14 = 56)**

18) A mining company took a lease at a cost of ₹ 50,000 on 1-4-2011 for 5 years. It was decided to depreciate the lease by annuity method, charging interest at 5% p.a. The annuity table shows that Re. 1 can be depreciated in full in 5 years with 5% interest p.a. by charging Re. 0.230975 annually.

Prepare the Lease Account and Interest Account for 5 years ending 31-3-2016.

19) X, Y and Z were partners sharing profits and losses in the ratio of 2 : 2 : 1 respectively. Their Balance Sheet as on 31-3-2016 was as under.

Balance Sheet as on 31-3-2016

| Liabilities | | ₹ | Assets | | ₹ |
|---|---|---|---|---|---|
| Creditors | | 25,000 | Cash at Bank | | 10,000 |
| Bills Payable | | 10,000 | Bills receivable | | 10,000 |
| Reserves fund | | 20,000 | Debtors | 40,000 | |
| Profits and loss A/c | | 3,000 | Less : PBD | 2,000 | 38,000 |
| Capitals : | | | Stock | | 20,000 |
| X | 50,000 | | Machinery | | 20,000 |
| Y | 30,000 | | Furniture | | 10,000 |
| Z | 20,000 | 1,00,000 | Buildings | | 50,000 |
| | | 1,58,000 | | | 1,58,000 |

Z retired on 1-4-2016 from the business. The following adjustment are to be made :

a) Stock to be increased by 20%.

b) Maintain P.B.D. at 10% on debtors.

c) Depreciate machinery and furniture by 10% each.

d) Buildings to be revalued at ₹ 60,000

e) Goodwill of the firm is created ₹ 25,000 and written off immediately.

Prepare :

i) Revaluation A/c

ii) Partners Capital A/c

iii) Balance Sheet as on 1-4-2016

20) Raju and Ravi are partners sharing profits and losses in the ratio of 3 : 2. Their Balance Sheet as on 31-3-2016 was as follows :

Balance sheet as on 31-3-2016

| Liabilities | | ₹ | Assets | ₹ |
|---|---|---|---|---|
| Creditors | | 20,000 | Cash in hand | 5,000 |
| Bills payable | | 10,000 | Bills Receivable | 15,000 |
| Bank loan A/c | | 15,000 | Debtors | 20,000 |
| Raju's loan A/c | | 5,000 | Motor car | 10,000 |
| General Reserves | | 10,000 | Machinery | 30,000 |
| Capitals : | | | Furniture | 15,000 |
| Raju | 50,000 | | Buildings | 50,000 |
| Ravi | 40,000 | 90,000 | Profits and loss A/c | 5,000 |
| | | 1,50,000 | | 1,50,000 |

On the above date the firm was dissolved. The assets realised as follows :

a) Buildings ₹ 60,000, Machinery ₹ 28,000, Bills Receivable ₹ 14,000. Debtors ₹ 19,000 and unrecorded assets realised ₹ 20,000.

b) Motor car is taken over by Raju at book value.

c) Furniture is taken over by Ravi for ₹ 13,000.

d) Creditors and Bills payable were paid off at a discount of 5% and Bank loan paid in full.

e) Dissolution expenses ₹ 2,000.

Prepare :

i) Realisation A/c

ii) Partners capital A/c

iii) Cash A/c

21) Sagar Company Ltd. issued 20000 shares of ₹ 100 each, at a discount ₹ 10 per share. The amount payable as follows :

| | |
|---|---|
| On applications | ₹ 20 |
| On allotments | ₹ 20 |
| On I[st] call | ₹ 30 |
| On Final call | ₹ 20 |

All the shares were subscribed and the money duly received except the final call on 1000 shares. The directors forfeited these shares and re-issued them as fully paid at ₹ 80 per share. Pass the Journal entries related to issued shares, forfeited and re-issued.

22) From the following trial balance of TATA Co. Ltd. as on 31-3-2016. Prepare the financial statement in vertical form.

Trial Balance as on 31-3-2016

| Sl. No. | Name of the Accounts | Debit ₹ | Credit ₹ |
|---|---|---|---|
| 1. | Equity share capital (Share of ₹ 100 each) | | 8,00,000 |
| 2. | Purchases and Sales | 4,00,000 | 9,50,000 |
| 3. | Goodwill | 3,00,000 | – |
| 4. | Trade Receivables | 2,50,000 | – |
| 5. | Opening Inventory | 60,000 | – |
| 6. | Patents | 50,000 | – |
| 7. | Surplus 1-4-2015 | – | 75,000 |
| 8. | Machinery | 2,60,000 | – |
| 9. | Buildings | 2,50,000 | – |
| 10. | 8% Debentures | – | 2,00,000 |
| 11. | Cash and cash equivalents | 2,00,000 | – |
| 12. | Trade payable | – | 1,80,000 |
| 13. | Salaries and Wages | 1,75,000 | – |
| 14. | Freights | 50,000 | – |
| 15. | Rent, Rates and Taxes | 60,000 | – |
| 16. | Interest on debentures | 16,000 | – |
| 17. | Power, Fuel expenses | 50,000 | – |
| 18. | General reserves | – | 1,00,000 |
| 19. | Advance given to employee's | 84,000 | – |
| 20. | Furniture | 1,00,000 | – |
| | | 23,05,000 | 23,05,000 |

Adjustments :

a) Closing inventories ₹ 1,45,000

b) Create provision for taxation ₹ 30,000

c) Transfer to General Reserves ₹ 40,000

d) Directors proposed dividend ₹ 50,000

e) Provide depreciation on machinery at 10% p.a. and furniture at 5% p.a.

f) D.D.T. at 16.995% on dividend.

23) From the following balance sheet of ABC Co. Ltd. as on 31-3-2015 and 31-3-2016. Prepare common size Balance Sheet.

Balance Sheet as on 31-3-2015 and 2016.

| Liabilities | 31-3-15 ₹ | 31-3-16 ₹ | Assets | 31-3-15 ₹ | 31-3-16 ₹ |
|---|---|---|---|---|---|
| Equity share capital | 5,00,000 | 6,00,000 | Buildings | 3,00,000 | 4,00,000 |
| General Reserves | 2,00,000 | 3,00,000 | Machinery | 2,50,000 | 3,00,000 |
| P & L A/c | 1,00,000 | 50,000 | Goodwill | 2,00,000 | 2,50,000 |
| Debentures | 4,00,000 | 3,00,000 | Current Investment | 2,60,000 | 2,00,000 |
| Trade payables | 2,00,000 | 2,50,000 | Inventories | 40,000 | 75,000 |
| Short-term provisions | 50,000 | 75,000 | Trade Receivables | 3,75,000 | 2,90,000 |
| | | | Cash in hand | 10,000 | 20,000 |
| | | | Cash at Bank | 15,000 | 40,000 |
| | 14,50,000 | 15,75,000 | | 14,50,000 | 15,75,000 |

24) Sun Club Dharwad was started from 1-4-2015. Its Receipts and Payments Account for the year ending 31-3-2016 was as follows :

Receipts and Payments A/c for the year ending 31-3-2016.

Dr. Cr.

| Receipts | ₹ | Payments | ₹ |
|---|---|---|---|
| To Subscription | 70,000 | By Salary | 26,500 |
| To Interest | 11,000 | By Tournament expenses | 20,000 |
| To Tournament fund | 30,000 | By Telephone charges | 6,500 |

| Dr. Receipts | ₹ | Payments | Cr. ₹ |
|---|---|---|---|
| To Games fees | 25,000 | By Games expenses | 10,000 |
| To Life membership fees | 40,000 | By Sports materials | 20,000 |
| To Donation | 2,00,000 | By Buildings | 2,00,000 |
| To Entrance fees | 1,00,000 | By Furniture | 30,000 |
| | | By Office expenses | 10,000 |
| | | By Investments | 1,00,000 |
| | | By Balance C/d | 53,000 |
| | 4,76,000 | | 4,76,000 |

Adjustments :

a) O/S salaries ₹ 2,000.

b) Donations and Entrance fees are capitalised.

c) Sports materials on 31-3-2016 were valued at ₹ 8,500.

d) Depreciate Buildings and Furniture by 10%

e) O/S subscription ₹ 5,000 and subscription received in advance ₹ 3,000.

Prepare :

i) Income and Expenditure A/c and

ii) Balance sheet.

## SECTION – D

## (PRACTICAL ORIENTED QUESTIONS)

Answer **any two** questions. Each question carries **5** marks : **(2 × 5 = 10)**

25) Prepare a Machinery account for two years with imaginary figures under fixed installment method.

26) Prepare current account of two partners under fixed capital system with five imaginary figures.

27) Prepare the comparative Income statement (Comparative Statement of Profit and Loss) for two year with five imaginary figures.